# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಅಧಿಸೂಚನೆ

**ಸಂಖ್ಯೆ: ಕವಿಪ್ರನಿನಿ/ಬಿ16/3281/2014-15** **ದಿನಾಂಕ: 27.11.2015**

ವಿಷಯ: ಕವಿಪ್ರನಿನಿಯ ಕಿರಿಯ ಸ್ಟೇಷನ್ ಪರಿಚಾರಕ ಹುದ್ದೆಯ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸುತ್ತಿರುವ ಬಗ್ಗೆ

ಉಲ್ಲೇಖ: 1. ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/3281/2014-15, ದಿನಾಂಕ: 12.06.2015.

2. ತಾತ್ಕಾಲಿಕ ಆಯ್ಕೆ ಪಟ್ಟಿ ಅಧಿಸೂಚನೆಯ ಸಂಖ್ಯೆ: ಕವಿಪ್ರನಿನಿ/ಬಿ16/3281/2014-15 ದಿನಾಂಕ: 13.11.2015.

****

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/ 3281/2014-15, ದಿನಾಂಕ: 12.06.2015 ಕ್ಕೆ ಅನುಗುಣವಾಗಿ ನಿಗಧಿಪಡಿಸಿದ ಶೈಕ್ಷಣಿಯ ವಿದ್ಯಾರ್ಹತೆಯಲ್ಲಿ (ಎಸ್ಎಸ್ಎಲ್‌ಸಿ/10 ನೇ ತರಗತಿ) ಗಳಿಸಿರುವ ಅಂಕಗಳ ಅರ್ಹತೆಯ ಆಧಾರದ ಮೇಲೆ ದಿನಾಂಕ: 03.09.2015 ರಿಂದ 06.09.2015 ರವರೆಗೆ ನಡೆದ ಸಹನಾ ಶಕ್ತಿ ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕಟ್-ಆಫ್ (Cut-Off) ಅಂಕಗಳೊಂದಿಗೆ ದಿನಾಂಕ: 13.11.2015 ರಂದು ಕವಿಪ್ರನಿನಿಯ ಹಾಗೂ ಸಂಬಂಧಿಸಿದ ಕಂಪನಿಗಳ ಅಂತರ್ಜಾಲದಲ್ಲಿ ಪ್ರಕಟಿಸಲಾಗಿತ್ತು.

ಕಿರಿಯ ಸ್ಟೇಷನ್ ಪರಿಚಾರಕ ಸೂಚಿತ ಹುದ್ದೆಗಳ ಪೈಕಿ ಪ್ರವರ್ಗ 2ಬಿ ಅಡಿಯಲ್ಲಿ ಅರ್ಹ ಅಭ್ಯರ್ಥಿಗಳ ಕೊರತೆಯಿಂದಾಗಿ 02 ಹುದ್ದೆಗಳು ಭರ್ತಿಯಾಗದೇ ಉಳಿದಿದ್ದು ಹಾಗೂ ವಿಕಲಚೇತನ ಕೋಟಾದಡಿಯಲ್ಲಿ ಅರ್ಹ ಅಭ್ಯರ್ಥಿಗಳ ಕೊರತೆಯಿಂದಾಗಿ 51 ಹುದ್ದೆಗಳು ಹಾಗೂ ಸದರಿ ಹುದ್ದೆಗಳನ್ನು ಬ್ಯಾಕಲಾಗ್ ಹುದ್ದೆಗಳೆಂದು ಪರಿಗಣಿಸಲಾಗಿರುತ್ತದೆ. ಹೈದ್ರಾಬಾದ್ ಕರ್ನಾಟಕ ಮೀಸಲಾತಿಯಡಿಯಲ್ಲಿ ಸದರಿ ಸೂಚಿತ ಹುದ್ದೆಗಳ ಪೈಕಿ ವಿಕಲಚೇತನ ಕೋಟಾದಡಿಯಲ್ಲಿ ಅರ್ಹ ಅಭ್ಯರ್ಥಿಗಳ ಕೊರತೆಯಿಂದಾಗಿ 03 ಹುದ್ದೆಗಳು ಭರ್ತಿಯಾಗದೇ ಉಳಿದಿರುವುದರಿಂದ, ವಿಕಲಚೇತನ ಕೋಟಾದಡಿಯ ಸದರಿ ಹುದ್ದೆಗಳನ್ನು ಬ್ಯಾಕಲಾಗ್ (Backlog) ಹುದ್ದೆಗಳೆಂದು ಪರಿಗಣಿಸಲಾಗಿರುತ್ತದೆ. ಬ್ಯಾಕಲಾಗ್(Backlog) ಹುದ್ದೆಗಳ ವಿವರಗಳು ಕೆಳಕಂಡಂತಿದೆ.

| ಕಿರಿಯ ಸ್ಟೇಷನ್ ಪರಿಚಾರಕ (Non-HK Region) | | | | | | | | |
|---|---|---|---|---|---|---|---|---|
| ಸಾಮಾನ್ಯ | ಪ.ಜಾ | ಪ.ಪಂ | ಪ್ರವರ್ಗ 1 | ಪ್ರವರ್ಗ 2ಎ | ಪ್ರವರ್ಗ 2ಬಿ | ಪ್ರವರ್ಗ 3ಎ | ಪ್ರವರ್ಗ 3ಬಿ | ಒಟ್ಟು |
| 17 | 10 | 02 | 03 | 10 | 3 | 03 | 03 | 51 |

| ಕಿರಿಯ ಸ್ಟೇಷನ್ ಪರಿಚಾರಕ (HK-Region) | | | |
|---|---|---|---|
| ಸಾಮಾನ್ಯ | ಪ.ಜಾ | ಪ್ರವರ್ಗ 2ಎ | ಒಟ್ಟು |
| 01 | 01 | 01 | 03 |

ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಅಭ್ಯರ್ಥಿಗಳು ಸಲ್ಲಿಸಿದ್ದ ಅರ್ಹ ಆಕ್ಷೇಪಣೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದ್ದು, ಅದರನ್ವಯ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಕಟ್-ಆಫ್ (Cut-Off) ಅಂಕಗಳೊಂದಿಗೆ ಕವಿಪ್ರನಿನಿಯ ಹಾಗೂ ಸಂಬಂಧಿಸಿದ ಕಂಪನಿಗಳ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ.

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)
ನಿಗಮ ಕಾರ್ಯಾಲಯ, ಕವಿಪ್ರನಿನಿ,
ಕಾವೇರಿ ಭವನ, ಬೆಂಗಳೂರು.